




ಗೋಣಗುತ್ತ ತಮ್ಮ ಹಾಲಂಡ್ ನಲ್ಲಿ ರಸ್ತೆಯಲ್ಲಿ ಸೈಕಲ್ ಸವಾರರಿಗೆ ಸಿಗುವ ಗೌರವವನ್ನು ಮೆಲುಕು ಹಾಕುತ್ತಾರೆ.

ಅಮ್‌ಸ್ಟರ್‌ಡ್ಯಾಮ್‌ಅನ್ನು ಸೈಕಲ್ ತುಳಿಯುತ್ತ ಸುತ್ತಿ ಅಥವಾ ನಡೆದು ತಿರುಗಿ, ಅಲ್ಲಿನ ಒಂದು ವಿಶೇಷ ಹಾಗೂ ಬಹು ಚರ್ಚಿತ ರಸ್ತೆಯ ಮುಖಾಮುಖಿಯಾಗದೆ ಹಿಂತಿರುಗುವುದು ಸಾಧ್ಯ ಇಲ್ಲ. ಅಥವಾ ಈ ವಿಷಯವನ್ನು ತನ್ನ ಮನೆಗೆ ಬಂದ ನೆಂಟರಿಂದ ಮುಚ್ಚಿಡಬೇಕೆಂಬುದು ಅಮ್‌ಸ್ಟರ್‌ಡ್ಯಾಮ್‌ನ ಉದ್ದೇಶವೂ ಅಲ್ಲ. ಜಗತ್ತಿನ ಎಲ್ಲ ಪ್ರವಾಸಿ ತಾಣಗಳು, ದೊಡ್ಡ ನಗರಗಳು, ವಾಣಿಜ್ಯ ಕೇಂದ್ರಗಳ ಹಿನ್ನಲೆಯಲ್ಲೊ ಅಥವಾ ಹೊರ ಭಾಗದಲ್ಲೋ ಕೆಂಪು ದೀಪದ ಬೀದಿ ಇರುವುದು ಸಾಮಾನ್ಯ. ಇಂತಹ ಬೀದಿಗಳನ್ನು ಹುಡುಕಿಕೊಂಡು ಹೋದ ಹೊರತೂ ಕಣ್ಣಿಗೆ ಬೀಳಲಿಕ್ಕಿಲ್ಲ . ಅಂತಹ ಜಾಗಕ್ಕೆ ಹೋಗುವುದು ಹೇಗೆ ಎಂದು ದಾರಿ ಕೇಳುವವರಿಗೂ ವಿಳಾಸ ತಿಳಿಸುವವರಿಗೂ ಮುಜಗರದ ವಿಷಯ.

ಆದರೆ ಅಮ್‌ಸ್ಟರ್‌ಡ್ಯಾಮ್ ಮಟ್ಟಿಗೆ ಹಾಗಲ್ಲ. ರೆಡ್ ಲೈಟ್ ಡಿಸ್ಟ್ರಿಕ್ಟ್ ಅನ್ನು ತನ್ನ ಹೃದಯ ಭಾಗದಲ್ಲಿಯೇ ಇಟ್ಟುಕೊಂಡ ನಗರವದು. ಬೇಕೆಂದು ಹುಡುಕಿಕೊಂಡು ಹೊರಟವರಿಗೂ ಅಥವಾ ನಾಚಿಕೆ, ಮಡಿ, ಭಯದಿಂದ ಈ ಸುದ್ದಿಯೇ ಬೇಡ ಎಂದು ಓಡಾಡುವವರಿಗೂ ಈ ಬೀದಿ ಅನಾಯಾಸವಾಗಿ ಎದುರಾಗುತ್ತದೆ. ನಗರದ ಮಧ್ಯ ಭಾಗದಲ್ಲಿ ಹಾದು ಹೋಗುವ ಕಾಲುವೆಯ ಎರಡು ಕಡೆಗಳಲ್ಲಿ ಸಾಲು ಕೋಣೆಗಳಲ್ಲಿ ಸಂಜೆಯ ಹೊತ್ತಿಗೆ ಕೆಂಪು ದೀಪ ಹೊತ್ತಿಕೊಂಡು ಪೂರ್ಣ ಪ್ರಮಾಣದ ಪಾರದರ್ಶಕ ಕನ್ನಡಿ ಕಿಟಕಿಯ ಹಿಂದೆ ತುಂಡು ಬಟ್ಟೆ ಉಟ್ಟು ವೇಶ್ಯೆಯರು ನಿಂತಿರುತ್ತಾರೆ. ಇವರಿಂದ ಸೇವೆ ಬಯಸುವವರು ಕಿಟಕಿಯ ಬಳಿ ಸನ್ನೆ ಮಾಡಿಯೋ ಮಾತಾಡಿಯೋ ಒಪ್ಪಂದಕ್ಕೆ ಬಂದು ಮುಂದುವರಿಯಬಹುದು .

ಈ ಬೀದಿಗಳನ್ನು ಅವಲಂಬಿಸಿ ನಡೆಯುವ ಅಪರಾಧ ಕೃತ್ಯಗಳು, ದೇಶಾಂತರಗಳಿಂದ ಇಲ್ಲಿಗೆ ಆಮದಾಗುವ ಅಮಾಯಕರನ್ನು ತಡೆಯುವುದು ಇಲ್ಲಿನ ಸರಕಾರ ಮತ್ತು ಆರಕ್ಷಕರಿಗೆ ದೊಡ್ಡ ಸವಾಲು. ಇಲ್ಲಿ ರೆಡ್ ಲೈಟ್ ಡಿಸ್ಟ್ರಿಕ್ಟ್ ಮಾಹಿತಿ ಕೇಂದ್ರವೂ ಇದೆ. ಈ ಬೀದಿ ಸುತ್ತಿಸಲೆಂದೇ ಅಧಿಕೃತ ಟೂರ್ ಗೈಡ್ ಗಳೂ ಇದ್ದಾರೆ. ಇಲ್ಲಿನ ವೇಶ್ಯೆಯರಿಗೆ ಸರಕಾರದ ರಕ್ಷಣೆ , ವೈದ್ಯಕೀಯ ತಪಾಸಣೆಗಳು , ಸೌಲಭ್ಯಗಳು ದೊರಕುತ್ತವೆ. 2000ನೆಯ ಇಸವಿಯಿಂದ ವೇಶ್ಯಾವಾಟಿಕೆ ಅಮ್‌ಸ್ಟರ್‌ಡ್ಯಾಮ್‌ನಲ್ಲಿ ಅಧಿಕೃತ ಉದ್ಯೋಗವಾಗಿದ್ದು, ಇಲ್ಲಿನ ವೇಶ್ಯೆಯರು ಸರಕಾರಕ್ಕೆ ತೆರಿಗೆಯನ್ನೂ ಕಟ್ಟುತ್ತಾರೆ.

ರೆಡ್ ಲೈಟ್ ಡಿಸ್ಟ್ರಿಕ್ಟ್ ನಲ್ಲಿ ನಡೆಯುವ ವ್ಯವಹಾರಗಳನ್ನು ದಂಧೆ, ಅಪರಾಧ ಅಂದು ತಿಳಿಯದೆ ಬದುಕು ಸಾಗಿಸಲು ಮನುಷ್ಯ ಆಯ್ದುಕೊಳ್ಳುವ ಎಲ್ಲ ಗೌರವಾನ್ವಿತ ವೃತ್ತಿಗಳಂತೆ ಎಂದು ಪರಿಗಣಿಸುವ ಅಥವಾ ಆ ಉದ್ಯೋಗದಲ್ಲಿ ಇರುವವರಿಗೆ ಸಮಾಜದೊಳಗೆ ಸಮಾನ ಸ್ಥಾನ ನೀಡುವ ಪ್ರಯತ್ನಗಳು ಇಲ್ಲಿ ಕಾಣಿಸುತ್ತವೆ. ಹಾಗೆಂದು ಸಮಸ್ಯೆಗಳು ಇಲ್ಲವೆಂದಲ್ಲ. ಇಲ್ಲಿನ ವೇಶ್ಯೆಯರಿಗೆ ಅಗತ್ಯ ಬಿದ್ದಾಗ ಬ್ಯಾಂಕ್ ನಲ್ಲಿ ಸಾಲ ಸುಲಭವಾಗಿ ಸಿಗದಿರುವುದು, ವೇಶ್ಯೆಯರನ್ನು ಮುಖ್ಯವಾಹಿನಿಗೆ ಸೇರಿಸುವ ಯೋಜನೆಗೆ ಪೂರ್ತಿ ಜಯ ಸಿಗದಿರುವುದು– ಇಲ್ಲಿನ ಸದ್ಯದ ಸಮಸ್ಯೆಗಳು. ಬೆಳಿಗ್ಗೆ ಸಂಸಾರ ಸಮೇತರಾಗಿ ಟುಲಿಪ್ ಹೂವುಗಳ ಹಿನ್ನಲೆಯಲ್ಲಿ ಫೋಟೋ ತೆಗೆಸಿಕೊಂಡ ಪ್ರವಾಸಿಗರು ಸಂಜೆ ಸಂಸಾರದೊಟ್ಟಿಗೆ ರೆಡ್ ಲೈಟ್ ಡಿಸ್ಟ್ರಿಕ್ಟ್ ನಲ್ಲೂ ಸುತ್ತಾಡಿ ಬರುತ್ತಾರೆ. ಈ ಬೀದಿಯಲ್ಲಿ ಕ್ಯಾಮೆರಾ ಬಳಕೆ ನಿಷಿದ್ಧವಾದ್ದರಿಂದ ಪ್ರವಾಸಿಗರಿಗೆ ಇಲ್ಲಿ ಫೋಟೋ ತೆಗೆಯುವ ಕೆಲಸ ಇಲ್ಲ. ಕುತೂಹಲಕ್ಕೆಂದೋ ಅಥವಾ ಯಾವುದೊ ಒಂದು ಪ್ರವಾಸಿ ಸ್ಥಳವನ್ನು ನೋಡುವಂತೆಯೇ ರೆಡ್ ಲೈಟ್ ಡಿಸ್ಟ್ರಿಕ್ಟ್ ಅನ್ನೂ ತಿರುಗಾಡುವವವರೇ ಇಲ್ಲಿ ಹೆಚ್ಚಾದ್ದರಿಂದ, ತಮ್ಮ ಕೋಣೆಯ ಗಾಜಿನ ಕಿಟಕಿಯ ಮುಂದೆ ನಿತ್ಯವೂ ತಿರುಗುವ ಸಾವಿರಾರು ಜನರನ್ನು ನಿರ್ಲಿಪ್ತವಾಗಿ ನೋಡುತ್ತಾ ವೇಶ್ಯೆಯರು ನಿಂತಿರುತ್ತಾರೆ.

ಸಾಲು ಸಾಲು ಬಣ್ಣ ಬಣ್ಣದ ಟುಲಿಪ್ ಹೂತೋಟವನ್ನು ಪ್ರವಾಸಿಗರ ಕಣ್ಣೆದುರು ನಿರಾಯಾಸವಾಗಿ ಬಿಚ್ಚಿಡುವ ಅಮ್‌ಸ್ಟರ್‌ಡ್ಯಾಮ್ ಪಟ್ಟಣ ಕೆಂಪು ದೀಪದ ಬೀದಿಯ ಗಾಜಿನ ಕಿಟಕಿಯ ಸಾಲು ಕೋಣೆಗಳನ್ನೂ ನಿಸ್ಸಂಕೋಚವಾಗಿ ತೆರೆದಿಡುತ್ತದೆ. ಅಮ್‌ಸ್ಟರ್‌ಡ್ಯಾಮ್ ನೋಡಿ ಮರಳುವ ಪ್ರವಾಸಿಗೆ ಟುಲಿಪ್ ಹೂದೋಟ, ಗಾಳಿಯಂತ್ರ, ಸೈಕಲ್ ಪ್ರೀತಿ ಗಳಂತಹ ಮೃದು ಮೆಲುಕುಗಳ ಜೊತೆಗೆ ಕೆಂಪು ದೀಪದ ರಸ್ತೆಯ ವಿಹ್ವಲತೆಗಳೂ ಸೇರಿಕೊಂಡು ಅನುಭವಗಳ 'ಸಿಲ್‌ಸಿಲಾ' ಅಥವಾ ಸರಣಿ ಇನ್ನೂ ಬೆಳೆಯುತ್ತದೆ.